

ಅರಮನೆಗೆ ನಿಶಾಸುಂದರಿ ಹಿಡಿದಿರುವ ಬೆಳಕಿನ ಕನ್ನಡಿ

'1.5 ಮೆಗಾ ವ್ಯಾಟ್ ವಿದ್ಯುತ್ ಬೇಡಿಕೆ ಇದೆ. 65 ಸಾವಿರ ಯುನಿಟ್ ವೆಚ್ಚವಾಗುತ್ತದೆ. ವಿದ್ಯುತ್ ದೀಪಾಲಂಕಾರದ ದಿನಗಳನ್ನು ವಿಸ್ತರಿಸಿದರೆ 1 ಲಕ್ಷ ಯುನಿಟ್‌ವರೆಗೆ ಬೇಕಾಗಬಹುದು. ಒಟ್ಟು ₹ 3 ಕೋಟಿ ಖರ್ಚಾಗುತ್ತದೆ. ಹಿಂದಿನ ವರ್ಷ ₹ 2.5 ಕೋಟಿ ಖರ್ಚಾಗಿತ್ತು' ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧಿಕಾರಿಗಳು ಹೇಳುತ್ತಾರೆ.

750 ಕೆ.ಜಿ ತೂಕದ ಅಂಬಾರಿ ಹೊತ್ತು ಅರ್ಜುನ ನೇತೃತ್ವದ ಜಂಬೂಸವಾರಿ ಸಾಗುವ ರಾಜಪಥ ಕೂಡ ಝಗಮಗಿಸುತ್ತಿದೆ.

ರಸ್ತೆಗಳು, ವೃತ್ತಗಳು ಎಷ್ಟೇ ಪ್ರಜ್ವಲಿಸಿದರೂ ಎಲ್ಲರ ಆಕರ್ಷಣೆಯ ಕೇಂದ್ರಬಿಂದು ವಿಶ್ವವಿಖ್ಯಾತ ಅಂಬಾವಿಲಾಸ ಅರಮನೆ. ಭುವಿಯ ಮೇಲಿನ ಈ ಬೆರಗಿನ ಮುಂದೆ ಸೆಲ್ಫಿ ತೆಗೆದುಕೊಳ್ಳುವವರಿಗೆ, ವಿಡಿಯೊ, ಫೋಟೊ ಕ್ಲಿಕ್ಕಿಸುವವರಿಗೆ ಲೆಕ್ಕವಿಲ್ಲ.

ಇಳಿಸಂಜೆಯಲ್ಲಿ ಅರಮನೆಯ ಇಡೀ ಅಂಗಳಕ್ಕೆ ಏಕಕಾಲಕ್ಕೆ ಬೆಳಕಿನ ರಂಗೋಲಿ ಇಟ್ಟಂತೆ ಭಾಸವಾಗುತ್ತದೆ. ಭಾನು–ಭುವಿ ಬೆರೆತಂತೆ ಕಾಣುತ್ತದೆ. ನಿತ್ಯ ಸಂಜೆ ಅರಮನೆ ಮುಂಭಾಗ ನಡೆಯುವ ಗಾನಸುಧೆ ಪ್ರವಾಸಿಗರ ಖುಷಿಯನ್ನು ಮತ್ತಷ್ಟು ಹೆಚ್ಚಿಸಿದೆ. ಸಾಮಾನ್ಯ ದಿನಗಳಲ್ಲಿ ಶನಿವಾರ, ಭಾನುವಾರ ಮಾತ್ರ ಅರಮನೆ ವಿದ್ಯುತ್ ದೀಪಾಲಂಕಾರ ಇರುತ್ತದೆ. ದಸರೆಯ ವೇಳೆ ಹತ್ತು ದಿನವೂ ಬೆಳಕಿನ ಮಜ್ಜನ.

ಲಕ್ಷಕ್ಕೂ ಅಧಿಕ ಬಲ್ಬುಗಳಿಂದ ಅರಮನೆಯನ್ನು ಸಿಂಗರಿಸಲಾಗಿದೆ. ಈ ಬಾರಿ ಸುಮಾರು 15 ಸಾವಿರ ಬಲ್ಬುಗಳನ್ನು ಹೊಸದಾಗಿ ಹಾಕಲಾಗಿದೆ. ಮೈಸೂರು ಸಂಸ್ಥಾನದ ಕೊನೆಯ ಅರಸ ಜಯಚಾಮರಾಜೇಂದ್ರ ಒಡೆಯರ್ ಸಮಯದಲ್ಲಿ ಅರಮನೆಗೆ ವಿದ್ಯುತ್ ದೀಪಾಲಂಕಾರ ಮಾಡಲಾರಂಭಿಸಿದರು.

ಮೈಸೂರು–ಬೆಂಗಳೂರು ರಸ್ತೆಯ ಕೊಲಂಬಿಯಾ ಏಷ್ಯಾ ಆಸ್ಪತ್ರೆ ಬಳಿ ದೀಪಾಲಂಕಾರದ ಸ್ವಾಗತ ಕಮಾನು ನಿರ್ಮಿಸಲಾಗಿದೆ. ಹಾಗೆಯೇ, ಬನ್ನಿಮಂಟಪದ ಎಲ್‌ಐಸಿ ವೃತ್ತ, ರೈಲ್ವೆ ನಿಲ್ದಾಣದ ವೃತ್ತ, ಅರಮನೆ ಎದುರಿನ ದೊಡ್ಡಕೆರೆ ಮೈದಾನ, ಕೆ.ಆರ್.ವೃತ್ತ, ಕುರುಬಾರಹಳ್ಳಿ ವೃತ್ತ, ಜೆಎಸ್‌ಎಸ್ ವಿದ್ಯಾಪೀಠ ವೃತ್ತ, ಸಯ್ಯಾಜಿ ರಾವ್ ರಸ್ತೆ, ಚಾಮರಾಜ ಜೋಡಿರಸ್ತೆ, ರಾಮಸ್ವಾಮಿ ವೃತ್ತ, ಹಾರ್ಡಿಂಜ್ ವೃತ್ತಗಳು ಝಗಮಗಿಸುತ್ತಿವೆ. ಚಾಮುಂಡಿಬೆಟ್ಟದಲ್ಲೂ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಕೆಲವೆಡೆ ವಸತಿ ಪ್ರದೇಶಗಳಲ್ಲೂ ಅಲಂಕಾರ ಮಾಡಿರುವುದು ವಿಶೇಷ.

ದಸರೆಯ ಮೈಸೂರಿನಲ್ಲಿ ಕತ್ತಲೆಗೆ ಒಂದಿಷ್ಟು ಕಾಲ ವಿಶ್ರಾಂತಿ, ವಿರಾಮ. ಬೆಳಕಿಗೆ ಡಬಲ್ ಡ್ಯೂಟಿ!

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in